# ವ್ಯಾಕರಣ ಬೋಧನಾ ವಿಧಾನಗಳು

# ಪೀಠಿಕೆ

ವ್ಯಾಕರಣ ಬೋಧನೆ ಕನ್ನಡ ಭಾಷಾ ಬೋಧನೆಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಶಾಲೆಯಲ್ಲಿ ವ್ಯಾಕರಣವನ್ನು ಪರಿಣಾಮಕಾರಿಯಾಗಿ ಬೋಧಿಸಲು ವಿಧಾನಗಳು ಉತ್ತಮ ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಗದ್ಯ/ಪದ್ಯವನ್ನು ಬೋಧಿಸಲು ಅನೇಕ ವಿಧಾನಗಳನ್ನು ಬಳಸುತ್ತೇವೆ. ಆದರೆ, ವ್ಯಾಕರಣವನ್ನು ಬೋಧಿಸುವಲ್ಲಿ ಕೆಲವೇ ವಿಧಾನಗಳನ್ನು ಮಾತ್ರ ಬಳಸಲಾಗುತ್ತದೆ.

1. ಅನುಗಮನ ಪದ್ಧತಿ
2. ನಿಗಮನ ಪದ್ಧತಿ
3. ಸಂಪೂರ್ಣ ಪದ್ಧತಿ

# ಅನುಗಮನ ಪದ್ಧತಿ

ಈ ಪದ್ಧತಿಯು ಮಾನವಶಾಸ್ತ್ರಗಾಮಿಯಾದುದು. ಇಲ್ಲಿ ಅನೇಕ ಉದಾಹರಣೆಗಳನ್ನು ನೀಡಿ ಒಂದು ಸಾಮಾನ್ಯ ತತ್ವಕ್ಕೆ ನಿಲುಕುವುದೇ ಪದ್ಧತಿಯ ಸಾರಸರ್ವಸ್ವವಾಗಿದೆ. ಇದನ್ನು ಸಂಶೋಧಕ ಪದ್ಧತಿ ಎಂತಲೂ ಕರೆಯುತ್ತಾರೆ.

1. ಬೌದ್ಧಿಕ ಚಟುವಟಿಕೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.
2. ಉದಾಹರಣೆಗಳ ಮೂಲಕ ಸೂತ್ರದ ಕಡೆಗೂ, ಮೂರ್ತದಿಂದ ಅಮೂರ್ತದ ಕಡೆಗೂ ಸಾಗುತ್ತದೆ.
3. ವಿಶಿಷ್ಟತೆಯಿಂದ ಸಾಮಾನ್ಯದೆಡೆಗೆ ಸಾಗುತ್ತದೆ.
4. ಈ ವಿಧಾನವನ್ನು ನಿಯಮ ಪರಿಪಾಲನಾ ಪದ್ಧತಿ, ಸಂಪ್ರದಾಯ ಪದ್ಧತಿ ಹಾಗೂ ಪರಾಮರ್ಶನ ವಿಧಾನವೆಂತಲೂ ಕರೆಯುತ್ತಾರೆ.
5. ಉದಾಹರಣೆಗಳಲ್ಲಿನ ಸಾಮಾನ್ಯ ಗುಣಲಕ್ಷಣಗಳಿಗೆ ಅನುಗುಣವಾಗಿ ಒಂದು ಸಾಮಾನ್ಯ ನಿಯಮಕ್ಕೆ ಬದ್ಧವಾಗಿರುವುದು

## ಅನುಗಮನ ಪದ್ಧತಿಯ ಹಂತಗಳು/ಅನುಸರಿಸುವ ಪದ್ಧತಿಗಳು

**ಅ) ಉದಾಹರಣೆಗಳ ಸಂಗ್ರಹ**

(ಸುರೇಂದ್ರ, ಮಹೇಶ್ವರ, ಮಹರ್ಷಿ, ಚಂದ್ರೋದಯ ಇತ್ಯಾದಿ)

**ಆ) ಉದಾಹರಣೆಗಳ ಪರಿಶೀಲನೆ**

(ಸುರ+ಇಂದ್ರ = ಸುರೇಂದ್ರ, ಮಹಾ + ಈಶ್ವರ, ಮಹಾ+ಋಷಿ = ಮಹರ್ಷಿ, ಚಂದ್ರ+ಉದಯ = ಚಂದ್ರೋದಯ)

**ಇ) ಲಕ್ಷಣ** (ಅ,ಆ ಕಾರಗಳಿಗೆ ಇ,ಈ ಕಾರಗಳು ಪರವಾಗಿ 'ಏ' ಕಾರವು ಪರವಾಗುತ್ತದೆ. ಉ,ಊ ಕಾರಕ್ಕೆ 'ಓ', ಋ ಕಾರಕ್ಕೆ 'ಅರ್' ಕಾರವು ಪರವಾಗುತ್ತದೆ

**ಈ) ಸೂತ್ರ ನಿರೂಪಣೆ**

**ಉ) ಉದಾಹರಣೆಗಳ ಸಂಗ್ರಹ** (ಇನ್ನಿತರೇ ಉದಾಹರಣೆಗಳು)

# ನಿಗಮನ ಪದ್ಧತಿ

ಈ ಪದ್ಧತಿಯನ್ನು ನಿಯಮ ಪರಿಪಾಲನಾ ಪದ್ಧತಿ ಎಂದು ಕರೆಯುತ್ತಾರೆ. ಇದರಲ್ಲಿ ಒಂದು ಸೂತ್ರ ಅಥವಾ ಸಾಮಾನ್ಯ ನಿಯಮವನ್ನು ಕೊಟ್ಟು, ಗುಣಗಳನ್ನು ಅರ್ಥೈಸಿಕೊಂಡು ಗುಣಗಳಿಗೆ ಅನುಗುಣವಾಗಿ ಉದಾಹರಣೆಗಳನ್ನು ಅನ್ವಯಿಸುವುದಾಗಿದೆ.

1 ಸೂತ್ರದಿಂದ ಉದಾಹರಣೆ ಕಡೆಗೆ, ಇಡಿಯಿಂದ ಬಿಡಿಯ ಕಡೆಗೆ, ಅಮೂರ್ತದಿಂದ ಮೂರ್ತದ ಕಡೆಗೆ ಸಾಗುತ್ತದೆ.

2. ಸಿದ್ಧ ವ್ಯಾಖ್ಯೆಯಿಂದ ನಾವು ಬಿಡಿ ಬಿಡಿಯಾದ ಸಂಗತಿಗಳ ಅಭ್ಯಾಸಕ್ಕೆ ಮುಂದುವರಿಸುತ್ತೇವೆ.

3. ಮೊದಲು ಸೂತ್ರವನ್ನು ಹೇಳಿದು ನಂತರ ನಿರ್ದಿಷ್ಟ ಉದಾಹರಣೆಗಳ ಮೂಲಕ ವಿಷಯವನ್ನು ಅರ್ಥೈಸುತ್ತೇವೆ.

# ಅನುಗಮನ ಪದ್ಧತಿಯ ಹಂತಗಳು

## 1. ಸೂತ್ರದ ವಿವರಣೆ

ಪೂರ್ವೋತ್ತರ ಪದಗಳು ಅಂಶಾಶಿಭಾವ ಸಂಬಂಧದಿಂದ ಸೇರಿ ಪೂರ್ವಪದದ ಅರ್ಥವು ಪ್ರಧಾನವಾಗಿರುವ ಸಂಗತಿಗಳನ್ನು 'ಅಂಶಿ ಸಮಾಸ' ಎನ್ನುತ್ತೇವೆ.

## 2. ಉದಾಹರಣೆಗಳನ್ನು ಸಂಗ್ರಹಿಸುವುದು

ತುದಿನಾಲಿಗೆ, ಹೊರಬಾಗಿಲು, ಹಿಂದಲೆ, ಕಡೆಗಣ್ಣು ಇತ್ಯಾದಿ

## 3. ಸೂತ್ರವನ್ನು ಉದಾಹರಣೆಗೆ ಅನ್ವಯಿಸುವುದು.

ನಾಲಿಗೆ+ತುದಿ = ತುದಿನಾಲಿಗೆ, ಬಾಗಿಲ+ಹೊರಗೆ = ಹೊರಬಾಗಿಲು, ತಲೆಯ+ಹಿಂದು = ಹಿಂದಲೆ, ಕಣ್ಣು+ಕಡೆ = ಕಡೆಗಣ್ಣು

# ಸಂಪೂರ್ಣ ಪದ್ಧತಿ

ಈ ಪದ್ಧತಿಯನ್ನು ಸಮನ್ವಯ ಪದ್ಧತಿ ಎಂದು ಕರೆಯುತ್ತೇವೆ.